# ಎಲ್ಲೆಲ್ಲೂ ಮಾಲಿನ್ಯದ ಅಟ್ಟಹಾಸ

ನಾಗರಿಕ ಜಗತ್ತು ಸೃಷ್ಟಿಸಿಕೊಂಡಿರುವ ಬಹು ದೊಡ್ಡ ಸಂಕಟಗಳಲ್ಲೊಂದು 'ಕಸ'ದ ಸಮಸ್ಯೆ. ನಾವೆಲ್ಲ ಒಂದಲ್ಲಾ ಒಂದು ಬಗೆಯಲ್ಲಿ ನಿರಂತರವಾಗಿ ಕಸ ಉತ್ಪಾದಿಸುತ್ತಿದ್ದೇವೆ. ಈ ಬೃಹತ್ ಕಸದ ವಿಲೇವಾರಿ ಬೆಂಗಳೂರಿನದ್ದೋ ಭಾರತದ್ದೋ ಸಮಸ್ಯೆ ಮಾತ್ರವಲ್ಲ, ಅದು ವಿಶ್ವದ ಸಮಸ್ಯೆಯೂ ಹೌದು. ಭೂಮಿ ಮಾತ್ರವಲ್ಲದೆ ನಮ್ಮ ದೇಹದಲ್ಲೂ ಪ್ಲಾಸ್ಟಿಕ್ ತ್ಯಾಜ್ಯ ನುಸುಳುತ್ತಿದೆ. ಪ್ಲಾಸ್ಟಿಕ್ ತ್ಯಾಜ್ಯ ಕೇಂದ್ರವಾಗಿಟ್ಟುಕೊಂಡು ಕಸದ ವಿರಾಟ್ ಸ್ವರೂಪದ ಚಿತ್ರಣ ಈ ಬರಹದಲ್ಲಿದೆ. 'ವಿಶ್ವ ಭೂಮಿ ದಿನ' (ಏಪ್ರಿಲ್ 22) ಸಂದರ್ಭದಲ್ಲಿ ಪ್ರಕಟಗೊಂಡಿರುವ, ಕಸದ ಕುರಿತು ಜಾಗೃತಿ ಮೂಡಿಸುವ ಈ ಬರಹ ಸಹೃದಯರ ನಡುವೆ ಗಂಭೀರ ಚರ್ಚೆಗೊಳಗಾಗಲಿ ಎನ್ನುವುದು 'ಸುಧಾ' ಆಶಯ.



### ಒಂದು ಚಿಕ್ಕ ಪೀಠಿಕೆ:

'ಸಾವಿಲ್ಲದ ಮನೆಯಿಂದ ಸಾಸಿವೆ ತಾ' ಎಂದು ಕಿಸಾಗೋತಮಿಗೆ ಗೌತಮ ಬುದ್ಧರು ಹೇಳಿದ್ದು ಪ್ರಸಿದ್ಧ ಕಥೆ. ಈಗ ಅಂತಹುದೇ ಸಂದರ್ಭ ಬಂದಿದ್ದರೆ, ಸಾವಿಲ್ಲದ ಮನೆಯ ಸಾಸಿವೆಯ ಬದಲು ಪ್ಲಾಸ್ಟಿಕ್ ಕಸ ಇಲ್ಲದ ಜಾಗದಿಂದ ಏನನ್ನಾದರೂ ತಾ ಎಂದು ಬುದ್ಧ ಭಗವಾನ್ ಹೇಳುತ್ತಿದ್ದರೇನೊ? ಕನಕದಾಸರ ಗುರು ತಮ್ಮ ಶಿಷ್ಯರಿಗೆ 'ಕಸ ಇಲ್ಲದ ಜಾಗದಲ್ಲಿ ನಿಂತು ಬಾಳೆಹಣ್ಣು ತಿನ್ನಿರಿ' ಎನ್ನುತ್ತಿದ್ದರೇನೋ?

ಕಸ ಎಲ್ಲೆಲ್ಲೂ ವ್ಯಾಪಿಸುತ್ತಿದೆ. ಆಳದ ಸಮುದ್ರಗಳಿಂದ ಹಿಡಿದು ಎತ್ತರೆತ್ತರದ ಪರ್ವತಗಳಲ್ಲೂ ಪ್ಲಾಸ್ಟಿಕ್ ಕಸ! ನೆಲ, ನೀರು, ಗಾಳಿ, ಬಾಹ್ಯಾಕಾಶ, ಮಾನವನ ರಕ್ತ... ಎಲ್ಲೆಡೆ ಕಸದ ದಾಂಗುಡಿ. ಕಸವಿಲ್ಲದ ಜಾಗವಿಲ್ಲ ಎನ್ನುವಂತಾಗಿದೆ. ಜನರ ಆರೋಗ್ಯ ಕೆಡುತ್ತಿದೆ. ಸರ್ಕಾರ, ನಗರ ಪಾಲಿಕೆಗಳ ಉಸಿರುಕಟ್ಟಿದೆ.

ಮೂರು ವಾರಗಳ ಹಿಂದೆ ಬೆಂಗಳೂರಿನ ಕಸ ಹೊತ್ತ 300ಕ್ಕೂ ಹೆಚ್ಚು ಲಾರಿಗಳು ಸ್ಥಳೀಯರ ವಿರೋಧದಿಂದಾಗಿ ಕಸವನ್ನು ಮಿಟ್ಟಗಾನಹಳ್ಳಿಯ ಭೂಭರ್ತಿ ಗುಂಡಿಗೆ ಸುರಿಯಲಾಗದೆ ಎರಡು ದಿನ ನಿಂತಿದ್ದವು. ಕಸದಿಂದ ದ್ರವ ತ್ಯಾಜ್ಯ ಹೆಚ್ಚಿನ ಪ್ರಮಾಣದಲ್ಲಿ ಹೊರಬರುತ್ತಿದ್ದು ಸುತ್ತಮುತ್ತಲಿನ ಕೆರೆ, ಕುಂಟೆ, ಬಾವಿ, ಕೊಳವೆಬಾವಿಗಳು ಕಲುಷಿತಗೊಂಡಿವೆ ಎನ್ನುವುದು ಸ್ಥಳೀಯರ ಅಳಲು. ಕಸವನ್ನು ಅವೈಜ್ಞಾನಿಕವಾಗಿ ವಿಲೇವಾರಿ ಮಾಡಿದ್ದಕ್ಕಾಗಿ ಸ್ಥಳೀಯ ಪಂಚಾಯಿತಿ ಕಸ ಸುರಿಯಲು ಬಿಟ್ಟಿರಲಿಲ್ಲ. ಸಂಧಾನದಿಂದ ಸಮಸ್ಯೆಯು ತಾತ್ಕಾಲಿಕವಾಗಿ ಬಗೆಹರಿದಂತಿದೆ.

ಭೂಮಿಯನ್ನು 'ರತ್ನಗರ್ಭ ವಸುಂಧರಾ' ಎನ್ನುತ್ತೇವೆ. ಭೂಮಿಯ ಒಳಗೆ ರತ್ನ ಮುತ್ತುಗಳೇ ತುಂಬಿವೆ ಎಂಬುದು ಇದರರ್ಥ. ಈಗ ಕೈ ಹಾಕಿದಲ್ಲೆಲ್ಲ ಬಗೆ ಬಗೆಯ ಕಸ ದೊರಕುತ್ತಿದೆ. ನಗರಗಳಲ್ಲಿ ಮನೆ ಬಾಗಿಲಿಗೇ ಬಂದು ಕಸ ಸಂಗ್ರಹಿಸುವ ವ್ಯವಸ್ಥೆ ಇದ್ದರೂ ರಾತ್ರಿ ವೇಳೆ ರಸ್ತೆ ಬದಿಗೆ ಕಸ ಎಸೆಯುವ ಅನಾಗರಿಕ ಪ್ರಕರಣಗಳಿಗೇನೂ ಕಡಿಮೆ ಇಲ್ಲ. ಜನರ ಆರೋಗ್ಯ ಮತ್ತು ಸ್ಥಳದ ಅಂದ ಎರಡನ್ನು ಕೆಡಿಸುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ ಶತಮಾನದ ಸವಾಲು ಎನಿಸಿದೆ.

### ಬಗೆ ಬಗೆಯ ಕಸ

ಕಸವೆಂದರೆ ಕೇವಲ ಪ್ಲಾಸ್ಟಿಕ್ ಕಸವಲ್ಲ. ಕಾಗದ, ಬಟ್ಟೆ, ಗಾಜು, ಲೋಹ, ಸ್ಯಾನಿಟರಿ ಪ್ಯಾಡ್, ಔಷಧ ಡಬ್ಬಿ, ಸೋಪು, ಶಾಂಪೂ ಸ್ಯಾಶೆ, ಆಸ್ಪತ್ರೆ ತ್ಯಾಜ್ಯ, ಉದ್ಯಮ ತ್ಯಾಜ್ಯ, ಹೋಟೆಲ್ ಕಸ, ಕೃಷಿ, ಕಟ್ಟಡ ತ್ಯಾಜ್ಯ, ಬಾಹ್ಯಾಕಾಶ, ಅಡುಗೆ, ತರಕಾರಿ, ಕೇಶ ಮುಂಡನ,

### ಬಗಾಸೆ (ಬಗಾಸ್) - ಪ್ಲಾಸ್ಟಿಕ್‌ಗೆ ಪರ್ಯಾಯ

ಕಬ್ಬಿನ ಜಲ್ಲೆಯಿಂದ ರಸ ತೆಗೆದಾದ ಮೇಲೆ ದೊರಕುವ ಬಗಾಸೆ (ಚರಟ) ಇಂದ ಅನೇಕ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಬಹುದು. ತಟ್ಟೆ ಲೋಟ ಬಟ್ಟಲು, ಕೈಚೀಲ, ಕವರ್, ಟೇಬಲ್ ಹಾಸು, ಟಿಶ್ಯೂಪೇಪರ್, ಟಾಯ್ಲೆಟ್ ರೋಲ್, ನೋಟ್‌ಬುಕ್, ಸಮಾರಂಭದ ಬಂಟಿಂಗ್, ಡಬ್ಬಿ, ಚಮಚ, ಟ್ರೇ, ಲಂಚ್ ಬಾಕ್ಸ್, ಖಾನೆಗಳಿರುವ ತಟ್ಟೆ – ಹೀಗೆ ಅನೇಕ ಪರಿಸರಸ್ನೇಹಿ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಅತ್ಯಂತ ಕಡಿಮೆ ಬೆಲೆಗೆ ದೊರಕುತ್ತವೆ. ಬಗಾಸೆ ಉತ್ಪನ್ನಗಳು ಬಳಸಿ ಬಿಸಾಡಿದ ನಂತರ ಮಣ್ಣಿನಲ್ಲಿ ಕರಗುತ್ತವೆ. ತಯಾರಿಸುವಾಗ ಅಲ್ಪ ಪ್ರಮಾಣದ ವಿದ್ಯುತ್ ಖರ್ಚಾಗುವುದನ್ನು ಬಿಟ್ಟರೆ ಬೇರೆ ಯಾವ ಅನಗತ್ಯ ಒತ್ತಡಗಳು ನಿಸರ್ಗದ ಮೇಲೆ ಬೀಳುವುದಿಲ್ಲ. ಜಗತ್ತಿನಲ್ಲಿ ತಯಾರಾಗುತ್ತಿರುವ ಒಟ್ಟು ಪೇಪರ್‌ನ ಶೇ. 20ರಷ್ಟು ಪೇಪರ್ ಬಗಾಸೆಯಿಂದಲೇ ತಯಾರಾಗುತ್ತದೆ.

ಬಗಾಸೆಯನ್ನು ಪ್ರಾಣಿಗಳ ಮೇವು, ಬಯೋ ಇಂಧನ, ರೋಗ ಪ್ರತಿರೋಧಕ ಔಷಧ (ಆಂಟಿ ಬಯೋಟಿಕ್), ವಿದ್ಯುತ್ ಉತ್ಪಾದನೆ, ಇಟ್ಟಿಗೆ ತಯಾರಿಕೆ, ಗುಡಿಸಲುಗಳ ಛಾವಣಿ ಮತ್ತು ಪೌಷ್ಟಿಕ ಗೊಬ್ಬರವನ್ನಾಗಿ ಬಳಸಬಹುದು. ಫ್ಯಾಕ್ಟರಿಗಳಲ್ಲಿ ಬಾಯ್ಲರ್ ಬಿಸಿ ಮಾಡಲು ಬಗಾಸೆಯನ್ನು ಯಥೇಚ್ಛವಾಗಿ ಬಳಸುತ್ತಾರೆ. ಕಿಣ್ವ, ಸಾವಯವ ಆಮ್ಲ, ಅಲ್ಕಲಾಯ್ಡ್, ಬಯೋ ಇಥನಾಲ್ ಉತ್ಪಾದನೆಯಲ್ಲಿ ಬಗಾಸೆ ಬಳಕೆಯಾಗುತ್ತದೆ. ಬಗಾಸೆಯಿಂದ ತಯಾರಾದ ಕಪ್ಪುಗಳನ್ನು ಮೂರು ವರ್ಷಗಳವರೆಗೆ ಶೇಖರಿಸಿಟ್ಟು ಬಳಸಬಹುದು. ಬಳಕೆಯ ನಂತರ ನಂತರ ಕೇವಲ 60 ದಿನಗಳಲ್ಲಿ ಜೈವಿಕವಾಗಿ ಮಣ್ಣಿನಲ್ಲಿ ಕರಗಿಬಿಡುತ್ತವೆ. ಪ್ರಾಣಿ, ಪಕ್ಷಿ, ಜಲಚರಗಳು ಇವುಗಳನ್ನು ತಿಂದರೆ ಯಾವುದೇ ಅಪಾಯವಿಲ್ಲ. 48 ಗಂಟೆಗಳ ಕಾಲ ಬಿಸಿ ನೀರನ್ನು ಹಾಕಿಟ್ಟರೂ ನೀರು ಸೋರುವುದಿಲ್ಲ.